ಒದಗಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗುತ್ತಿದೆ. ಹಾಗೂ ಈ ವರ್ಗದ ರೈತರಿಗೆ ಉತ್ತಮ ಬೆಳೆಗಳ ತಾಕುಗಳನ್ನು ನೋಡಲು ಪ್ರವಾಸ ಕಾರ್ಯಕ್ರಮವನ್ನು ಯೋಜಿಸಲಾಗುತ್ತಿದೆ.

ವಿಷಯ : -ಪ್ರತಿಯೊಂದು ಜಿಲ್ಲಾಪರಿಷತ್ತಿನಲ್ಲಿ ಸೂಪರಿಂಟೆಂಡೆಂಟ್ ಇಂಜಿನೀಯರ್ ಹುದ್ದೆಯನ್ನು ತುಂಬುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 344(407)

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರತಿಯೊಂದು ಜಿಲ್ಲಾಪರಿಷತ್ತಿನಲ್ಲಿ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಕೊಡುವಲ್ಲಿ ಜಿಲ್ಲಾಪರಿಷತ್ತಿನವರು ಲೋಕೋಪಯೋಗಿ ಇಲಾಖೆ ಸೂಪರಿಂಟೆಂಡೆಂಟ್ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆಯ ಸೂಪರಿಂಟೆಂಡೆಂಟ್ ಇಂಜಿನಿಯರ್ ಹಾಗೂ ಜಿಲ್ಲಾಪರಿಷತ್ ಇಂಜಿನಿಯರಿಂಗ್ ವಿಭಾಗದ ಸೂಪರಿಂಟೆಂಡೆಂಟ್ ಇಂಜಿನಿಯರ್ ಇವರ ಕಡೆಯಿಂದ ಮಾಡಿಸುತ್ತಿರುವುದರಿಂದ ಬಹಳ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಜಿಲ್ಲಾಪರಿಷತ್ತಿನಲ್ಲಿ ಒಬ್ಬ ಅಧೀಕ್ಷಕ ಅಭಿಯಂತರ ಹುದ್ದೆಯನ್ನು (ಸೃಜಿಸಿ)ಹುದ್ದೆ ನೇಮಿಸಿ ಆ ಹುದ್ದೆಗೆ ಪೂರ್ಣ ಅಧಿಕಾರ ವಹಿಸಿಕೊಡುವ ಕಾರ್ಯಕ್ರಮ ಸರ್ಕಾರ ಹಮ್ಮಿಕೊಂಡಿದೆಯೇ?

ಇ) ಲೋಕೋಪಯೋಗಿ ಇಲಾಖೆಯ ಅಧೀಕ್ಷಕ ಅಭಿಯಂತರರು, ಜಿಲ್ಲಾಪರಿಷತ್ ಇಂಜಿನಿಯರಿಂಗ್ ವಿಭಾಗದ ಅಧೀಕ್ಷಕ ಅಭಿಯಂತರರು ಹಾಗೂ ಸಣ್ಣ ನೀರಾವರಿ ಇಲಾಖೆಯ ಅಧೀಕ್ಷಕ ಅಭಿಯಂತರರು ಇವರು ಜಿಲ್ಲಾಪರಿಷತ್ ಕೆಲಸಗಳನ್ನು ಸೂಪರ್‌ವೈಸಿಂಗ್ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬೆಳಗಾವಿ ಜಿಲ್ಲಾಪಂಚಾಯತ್‌ನಲ್ಲಿ ಬರುವ ಎಷ್ಟು ಜಿಲ್ಲಾಪಂಚಾಯತ್ ಕೆಲಸಗಳನ್ನು ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಜಿಲ್ಲಾಪರಿಷತ್ ಇಂಜಿನಿಯರಿಂಗ್ ವಿಭಾಗದ ಅಧೀಕ್ಷಕ ಅಭಿಯಂತರರು ಹಾಗೂ ಸಣ್ಣ ನೀರಾವರಿ ಇಲಾಖೆಯ ಅಧೀಕ್ಷಕ ಅಭಿಯಂತರರು ಇವರು ಮೇಲ್ವಿಚಾರಣೆ ಹಾಗೂ ಮುನ್ಸೂಚನೆ ಇಲ್ಲದೆ ತನಿಖೆಗಳನ್ನು ಇಲ್ಲಿಯವರೆಗೆ ಮಾಡಿರುವರೇ?

ಶ್ರೀ ಎಂ.ವೈ. ಘೋರ್ಪಡೆ

(ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಜಿಲ್ಲಾಪಂಚಾಯತ್‌ಗಳು ನಿರ್ವಹಿಸುವ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ಆಯಾ ವೃತ್ತದ ಅಧೀಕ್ಷಕ ಅಭಿಯಂತರರುಗಳಿಂದ ಪಡೆಯುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಅಂತಹ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಜಿಲ್ಲಾಪಂಚಾಯತ್ ನಿರ್ವಹಿಸುತ್ತಿರುವ ಕೆಲಸಗಳನ್ನು ಆಯಾ ವಲಯಕ್ಕೆ ಸಂಬಂಧಿಸಿದ ಅಧೀಕ್ಷಕ ಅಭಿಯಂತರರುಗಳು ವ್ಯವಸ್ಥಿತ ರೀತಿಯಲ್ಲಿ ಸೂಪರ್‌ವೈಸ್ ಮಾಡುತ್ತಿಲ್ಲವೆಂದು ಸರ್ಕಾರದ

ಗಮನಕ್ಕೆ ಬಂದಿದೆ.

ಬೆಳಗಾಂ ಜಿಲ್ಲಾಪಂಚಾಯತ್‌ಗೆ, ಸಂಬಂಧಿಸಿದಂತೆ ಮುನ್ಸೂಚನೆ ಇಲ್ಲದೆ ತನಿಖೆಗಳನ್ನು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ವಿಷಯ : – ಬೆಳಗಾವಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಹಣ್ಣಿನ ಸಸಿಗಳನ್ನು ಹಂಚುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 345(496)

ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಈ ವರ್ಷ ಯಾವಯಾವ ಹಣ್ಣಿನ ಗಿಡಗಳನ್ನು ವಿತರಣೆ ಮಾಡಲಾಗಿದೆ ಹಾಗೂ ಎಷ್ಟು ಗಿಡಗಳನ್ನು ವಿತರಣೆ ಮಾಡಲಾಗಿದೆ?

ಆ) ಸಾರ್ವಜನಿಕರಿಗೆ ಉತ್ತಮ ತಳಿಯ ತೆಂಗಿನ ಸಸಿಗಳು ಲಭ್ಯವಾಗುತ್ತಿರುವುದಿಲ್ಲ ಎಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಉತ್ತಮ ತಳಿಯ ತೆಂಗಿನ ಸಸಿಗಳನ್ನು ಬೇರೆ ಕಡೆಯಿಂದ ತರಿಸಿ ಸಾರ್ವಜನಿಕರಿಗೆ ವಿತರಣೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಈ) ಬೆಳಗಾವಿ ಜೆಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯವರು ಯಾವಯಾವ ತರಹದ ಸಸಿಗಳನ್ನು ಹಾಗೂ ಎಷ್ಟೆಷ್ಟು ತರಹದ ಹಣ್ಣಿನ ಸಸಿಗಳನ್ನು ತಯಾರು ಮಾಡಿರುತ್ತಾರೆ?

ಉ) ಕೇವಲ ವೆಸ್ಟನ್ ಘಾಟಿನಲ್ಲಿ ಬರುವ ಹಾಗೂ ಎಸ್.ಸಿ. ಎಸ್.ಟಿ ಜನರಿಗೆ ಮಾತ್ರ ಈ ಸಸಿಗಳನ್ನು ಮಾರಾಟ ಮಾಡಲಾಗುತ್ತಿದ್ದು ಸಾರ್ವಜನಿಕರು ಹಣ ಕೊಡಲು ತಯಾರಾಗಿದ್ದರೂ ಸಹ ಅವರಿಗೆ ಸಸಿಗಳು ಲಭ್ಯವಾಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ)ಹಾಗಿದ್ದಲ್ಲಿ ಸಾರ್ವಜನಿಕರಿಗೂ ಸಹ ಎಲ್ಲಾ ತರಹದ ಹಣ್ಣಿನ ಸಸಿಗಳನ್ನು ಯೋಗ್ಯ ದರದಲ್ಲಿ ಮಾರಾಟ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :-

ಬೆಳಗಾವಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ 1993-94ನೇ ಸಾಲಿನಲ್ಲಿ ಜುಲೈ ಮಾಹೆಯ ಅಂತ್ಯದವರೆಗೆ ಈ ಕೆಳಕಂಡ ಹಣ್ಣಿನ ಮತ್ತು ಇತರೆ ಗಿಡಗಳನ್ನು ವಿತರಿಸಲಾಗಿದೆ.(1-4-93 ರಿಂದ 31-7-1993) ರಜಾದಿನಗಳನ್ನು ಹೊರತುಪಡಿಸಿ, ಮೇಲ್ಕಾಣಿಸಿರುವ ಅವಧಿಯಲ್ಲಿ ಗಿಡಗಳನ್ನು ವಿತರಿಸಲಾಗಿದೆ.

1.	ಮಾವಿನ ಕಸಿಗಿಡಗಳು	26,699
2.	ಸೀಬೆ ಕಸಿಗಿಡಗಳು	1,175
3.	ಸಪೋಟ ಕಸಿಗಿಡಗಳು	14,470
4.	ದಾಳಿಂಬೆ ಗೂಟಿಗಳು	3,900
5.	ನಿಂಬೆ ಸಸಿಗಳು	5,810